(ಇ) ವಿಷಯ:- 'ಕರಾವಳಿ ಅಲೆ' ಪ್ರಧಾನ ಸಂಪಾದಕರನ್ನು ಮಾನನಷ್ಟ ಮೊಕದ್ದಮೆಯಡಿ ಬಂಧಿಸಿ ಕೈ ಕೋಳ ತೊಡಿಸಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿರುವ ಬಗ್ಗೆ :

ಶ್ರೀ ಮಲ್ಲಿಕಾರ್ಜುನ ಖರ್ಗೆ (ಚಿತ್ತಾಪುರ) :- ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಗಮನವನ್ನು ಸೆಳೆದಿದ್ದೇನೆ. ನಿಯಮ 73ರ ಅಡಿಯಲ್ಲಿ ಕರಾವಳಿ ಅಲೆ ಪ್ರಧಾನ ಸಂಪಾದಕರನ್ನು ಮಾನನಷ್ಟ ಮೊಕದ್ದಮೆಯೊಂದರಲ್ಲಿ ಅಪರಾಧಿಯಾಗಿ ಬಂಧಿಸಿ, ಅವರಿಗೆ ಕೈ ಕೋಳ ತೊಡಿಸಿ, ನ್ಯಾಯಾಧೀಶರ ಮುಂದೆ ಹಾಜರು ಪಡಿಸಿರುವ ಬಗ್ಗೆ ಮಾನ್ಯ ಗೃಹ ಸಚಿವರು ಹೇಳಿಕೆಯನ್ನು ನೀಡಬೇಕೆಂದು ಕೇಳುತ್ತೇನೆ.

ಡಾ॥ ವಿ.ಸ್.ಆಚಾರ್ಯ(ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಿಗೆ ನಾನು ಒಂದು ದೃಷ್ಟಿಯಲ್ಲಿ ಅಭಾರಿಯಾಗಿದ್ದೇನೆ, ಏಕೆಂದರೆ ನಾನು ಪತ್ರಕರ್ತರ ಬಗ್ಗೆ ಬಹಳ ಗೌರವವಿರುವಂಥ ಒಬ್ಬ ವ್ಯಕ್ತಿ. ಅನಾವಶ್ಯಕವಾಗಿ ಸರ್ಕಾರ, ಗೃಹ ಸಚಿವರ ಹೆಸರು, ಈ ವಿಚಾರದಲ್ಲಿ ಆಗಾಗ ಬಂದಿತ್ತು. ಆ ದೃಷ್ಟಿಯಿಂದ ಒಂದು ಸ್ಪಷ್ಟೀಕರಣವನ್ನು ಕೊಡುವಂಥ ಅವಕಾಶ ನನಗೆ ಇವತ್ತು ಸಿಕ್ಕಿದೆ.

ಶ್ರೀ ಬಿ.ವಿ. ಸಿತಾರಾಂ ಬಿನ್ ವೆಂಕಟರಮಣ ಇವರು ಸುಮಾರು 17 ವರ್ಷದಿಂದಲೂ ಕರಾವಳಿ ಅಲೆ ದಿನ ಪತ್ರಿಕೆಯ ಸಂಪಾದಕರಾಗಿ ಈ ಪತ್ರಿಕೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಉಡುಪಿ ಜಿಲ್ಲೆಯ ಶೀರ್ವ ಪೊಲೀಸ್ ಠಾಣೆ ಸರಹದ್ದಿನ ಶ್ರೀ ಭೋಜರಾಜ ಶೆಟ್ಟಿ ಬಿನ್ ಶ್ರೀನಾಥ್ ಶೆಟ್ಟಿ, ಬಿಳಿಯೂರು ಹೌಸ್, ಕುರ್ಕಾಲು ಗ್ರಾಮ, ಶಂಕರಪುರ ಪೋಸ್ಟ್, ಉಡುಪಿ ತಾಲ್ಲೂಕು ಇವರು ಉಡುಪಿಯ ಅಡಿಷನಲ್ ಸಿವಿಲ್ ಜಡ್ಜ್ (Junior Division) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ದಿನಾಂಕ 17-12-2006 ರಂದು ಕರಾವಳಿ ಅಲೆ ಪತ್ರಿಕೆಯಲ್ಲಿ ವಿದ್ಯಾರ್ಥಿಯೋರ್ವಳ ಮೇಲೆ ಅತ್ಯಾಚಾರ ಮಾಡಿದ ಬಗ್ಗೆ ವರದಿಯಾದ ಪ್ರಕಟಣೆಯ ಹಿನ್ನೆಲೆಯಲ್ಲಿ ಮಾನನಷ್ಟ ಮೊಕದ್ದಮೆಯನ್ನು ಹೂಡಿದ್ದು, ಉಡುಪಿಯ ಫನ ಒಂದನೇಯ ಜೆ.ಎಂ.ಎಫ್.ಸಿ. ನ್ಯಾಯಾಲಯವು ವಿಚಾರಣೆಯನ್ನು ನಡೆಸಲು ಪಿ.ಎಸ್.ಐ. ಶೀರ್ವ ಪೊಲೀಸ್ ಠಾಣೆ ಇವರಿಗೆ ವಹಿಸಿತ್ತು.

ಸದರಿ ಪತ್ರಕರ್ತರ ವಿರುದ್ಧ 2007 ರಲ್ಲಿ 4 ಬಾರಿ ಸಮನ್ಸ್ ಬಂದಿದ್ದು, 2008 ರಲ್ಲಿ 7 ಬಾರಿ ವಾರೆಂಟ್‌ಗಳು ಹೊರಡಿಸಿದ್ದು, ಜಾರಿ ಮಾಡಲು

ಹೋದಾಗಲೆಲ್ಲಾ ಸದರಿ ಪತ್ರಕರ್ತರು ಹೆಸರು ವಿಳಾಸ ಸರಿಯಿಲ್ಲವೆಂದು ಹಾಗೂ ವಿಳಾಸದಲ್ಲಿ ಸಿಗದೇ ತಪ್ಪಿಸಿಕೊಳ್ಳುತ್ತಿದ್ದರು.

ದಿನಾಂಕ 04-01-2009 ರಂದು ನ್ಯಾಯಾಲಯ ನೀಡಿದ ಜಾಮೀನು ರಹಿತ ವಾರೆಂಟ್‌ನಂತೆ ಶೀರ್ವ ಠಾಣೆಯ ಪಿಎಸ್‌ಐರವರು ಶ್ರೀ ಸೀತಾರಾಂ ರವರನ್ನು ಕಾರ್ಕಳದಲ್ಲಿ ಪತ್ತೆ ಹಚ್ಚಿ ವಾರೆಂಟ್ ಜಾರಿ ಮಾಡಿ ರಾತ್ರಿ 8:00 ಗಂಟೆಗೆ ದಸ್ತಗಿರಿ ಮಾಡಿ ರಾತ್ರಿ 10:40 ಕ್ಕೆ ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ನ್ಯಾಯಾಧೀಶರು ನ್ಯಾಯಾಂಗ ಬಂಧನಕ್ಕೆ ಆದೇಶಿಸಿ ಮರುದಿನ ದಿನಾಂಕ 05-01-2009 ರಂದು ಪುನಃ ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ಆದೇಶಿಸಿ ಉಡುಪಿ ಉಪಕಾರಾಗೃಹಕ್ಕೆ ಕಳುಹಿಸಿಕೊಟ್ಟಿರುತ್ತಾರೆ.

ದಿನಾಂಕ 05-01-2009 ರಂದು ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯ ಉಡುಪಿಯಲ್ಲಿ ಆರೋಪಿಯನ್ನು ಹಾಜರುಪಡಿಸುವ ವೇಳೆಯಲ್ಲಿ ಬೆಂಗಾವಲು ಪೊಲೀಸರಾದ (ಸಶಸ್ತ್ರ ಮೀಸಲು ಸಿಬ್ಬಂದಿ) ಎ.ಹೆಚ್.ಸಿ. 1446 ಶ್ರೀ ಎಂ. ನಾಗೇಶ್ ಮತ್ತು ಎ.ಹೆಚ್.ಸಿ. 243 ಶ್ರೀ ಕೆ.ಎಸ್. ಅರವಿಂದರವರುಗಳು ಆರೋಪಿತರಿಗೆ ಕೈಕೋಳ ತೊಡಿಸಿರುತ್ತಾರೆ. ಈ ಸಂಬಂಧ ಡಿವೈಎಸ್‌ಪಿ ಕಾರ್ಕಳ ಇವರಿಂದ ಪೂರ್ವಬಾವಿ ವಿಚಾರಣೆಯನ್ನು ನಡೆಸಿ, ಇಲಾಖೆಯ ವಿಚಾರಣೆಯನ್ನು ಬಾಕಿ ಇಟ್ಟು ಮೇಲಿನ ಇಬ್ಬರು ಡಿಆರ್ ಸಿಬ್ಬಂದಿಯನ್ನು ಅಮಾನತ್ತುಗೊಳಿಸಲಾಗಿದೆ.

ಸದರಿ ಪತ್ರಕರ್ತರನ್ನು ದಿನಾಂಕ 05-01-2009 ರಂದು ನ್ಯಾಯಾಲಯಕ್ಕೆ ಹಾಜರುಪಡಿಸುವಾಗ, ಅವರು ತನಗೆ ಕೈಕೋಳ ತೊಡಿಸದಿದ್ದರೆ ತಾನು ನ್ಯಾಯಾಲಯಕ್ಕೆ ಬರುವುದಿಲ್ಲವೆಂದು ಪ್ರತಿಭಟನೆ ವ್ಯಕ್ತಪಡಿಸಿ, ಕೈಕೋಳ ತೊಡಿಸಲು ಒತ್ತಾಯಿಸಿರುವುದರಿಂದ, ಕೈಕೋಳ ತೊಡಿಸಿದ್ದೇವೆಂದು ಅಮಾನತ್ತಿಗೆ ಒಳಗಾದ ಪೊಲೀಸು ಸಿಬ್ಬಂದಿಯವರು ತಿಳಿಸುತ್ತಾರೆ.

ಡಾ॥ ವಿ.ಎಸ್. ಆಚಾರ್ಯ:- ಮಾನ್ಯ ಅಧ್ಯಕ್ಷರೆ, ವಿಷಯ ಇಷ್ಟು ಇದೆ, ನಾನು ಈ ವಿಷಯವಾಗಿ ಪತ್ರಿಕೆಗಳಲ್ಲಿ ಬಂದಾಗ ಕಾರ್ಕಳದ Dy.SPಯವರನ್ನು ನಾನು ಕೇಳಿದಾಗ, ಅವರೇ ನಾನು ಕಾರಿನಿಂದ ಇಳಿಯುವಾಗ ಕೈಕೋಳ ತೊಡಿಸಬೇಕೆಂದು ತಾಕಿತ್ತು ಮಾಡಿದ್ದಾರಂತೆ. ಇದರ ಬಗ್ಗೆ ನಾನು ವಿಚಾರಣೆಯನ್ನು ಮಾಡಿದಾಗ, ದೊಡ್ಡ ಕ್ಷೇತ್ರದ ಹೆಸರನ್ನು ಹೇಳಿ, ಆ ಕ್ಷೇತ್ರಕ್ಕೆ ತಾವು ಹೋಗಿ ಹೇಳುವುದಕ್ಕೆ ಸಿದ್ಧರಿದ್ದೇವೆಂಬ ಮಾತನ್ನು ಆ ಪೊಲೀಸರು ಹೇಳಿದ್ದಾರೆ. ಅದರೂ ನಾವು

ವಿಚಾರಣೆಯನ್ನು ಬದಿಯಲ್ಲಿಟ್ಟು, ಅವರನ್ನು suspension ಮಾಡಿದ್ದೇವೆಂಬ ವಿಚಾರವನ್ನು ಹೇಳಿದ್ದಾರೆ. ಇದರ ಸತ್ಯಾಂಶ ಇಷ್ಟು ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಇಲ್ಲಿ ಹೇಳಿರುವಂಥಾದ್ದು ಒಂದು, ಅಲ್ಲಿಂದ ನಮಗೆ ಬಂದಿರುವಂಥ ಮಾಹಿತಿ ಪ್ರಕಾರ ಕರಾವಳಿ ಅಲೆ ಪ್ರಧಾನ ಸಂಪಾದಕರು ಯಾವಾಗಲೂ ಕೂಡ ಸ್ವಲ್ಪ ಅಲ್ಲಿ ಸ್ಥಳೀಯ ಘಟನೆಗಳ ಬಗ್ಗೆ ಮತ್ತು ವಿಶೇಷವಾಗಿ ಅಲ್ಲಿನ RSS ಚಟುವಟಿಕೆಗಳ ಬಗ್ಗೆ ಮತ್ತು ಹಿಂದು ಸಂಘಟನೆಗಳ ಬಗ್ಗೆ ಹಾಗಾಗ್ಗೆ ಪತ್ರಿಕೆಗಳಲ್ಲಿ ಕೆಲವು articles ಅನ್ನು ಬರೆಯುತ್ತಿದ್ದರು, ಮತ್ತು ವಿಶೇಷವಾಗಿ ಅವರು ಕೋಮುವಾದಿ ಶಕ್ತಿಗಳಿಗೆ ವಿರೋಧಿಸಿ ಅವರು ಲೇಖನಗಳನ್ನು ಬರೆಯುತ್ತಿದ್ದರೆನ್ನುವಂಥ ಮಾಹಿತಿಯನ್ನು ನಮಗೆ ಕೊಟ್ಟಿದ್ದಾರೆ. ಅದು ನಮಗೆ ಬಂದಿದೆ. ನಮಗೆ ಅನೇಕ ಜನ ಆ coastal belt ನಲ್ಲಿರುವಂಥ ಮುಖಂಡರು ಕೂಡ ಈ ಮಾತನ್ನು ಹೇಳಿದ್ದಾರೆ. ಇದು ಒಂದು ಕಡೆ. ಎರಡನೆಯದಾಗಿ ಮಾನ್ಯ ಗೃಹ ಸಚಿವರೆ ಪದೇ ಪದೇ ಕಿರುಕುಳ ಕೊಡುತ್ತಿದ್ದಾರೆ. ಇವರ ಮತಕ್ಷೇತ್ರದಲ್ಲೇ ಅವರ ಜಿಲ್ಲೆಯಲ್ಲೇ ಇವರು ಇದ್ದ ಕಾರಣ ಯಾವಾಗಲೂ ಯಾವುದೇ ಒಂದು article ಅಥವಾ reporting ಅವರ ಪತ್ರಿಕೆಯಲ್ಲಿ ಆದರೆ ಅದನ್ನು ಗಂಭೀರವಾಗಿ ತೆಗೆದುಕೊಂಡು ಮಾನ್ಯ ಗೃಹ ಸಚಿವರು ಅವರ ಮೇಲೆ ಸವಾರಿ ಮಾಡುವಂಥಾದ್ದು ಮಾಡಿದ್ದಾರೆಂಬ ಅಪಾದನೆಯನ್ನು ಅವರ ಮೇಲೆ ಇದೆ. ಮೂರನೆಯದು ಈ ಸಂಪಾದಕರು ನನಗೆ ಜೀವ ಬೆದರಿಕೆ ಇದೆ, ಏಕೆಂದರೆ ಗೃಹ ಸಚಿವರಿಂದ ರಕ್ಷಣೆ ಇಲ್ಲ. ಮಾನ್ಯ ಗೃಹ ಸಚಿವರಿಂದಲೇ ನನಗೆ ಬೆದರಿಕೆ ಇದ್ದಾಗ, ಅಪಾಯವಿದ್ದಾಗ, ನನಗೆ ಯಾರೂ ರಕ್ಷಣೆಯನ್ನು ಕೊಡುವುದಿಲ್ಲ. ಅದಕ್ಕೆ ನನ್ನನ್ನು ಜೈಲಿನಲ್ಲೆ ಇಟ್ಟು ಬಿಡಿ ಮತ್ತು ನನ್ನ ಜೀವಕ್ಕೆ ರಕ್ಷಣೆಯನ್ನು ಕೊಡಿಯೆಂದು ಪೊಲೀಸರಿಗೆ ಅವರೇ ಕೇಳಿಕೊಂಡಿದ್ದಾರೆ. ಅದರೆ ಅವರು handcuff ಹಾಕಿಕೊಂಡು ಹೋಗಿಯೆಂದು ಹೇಳಿದ್ದಾರೆಂದು ತಾವು ಹೇಳುತ್ತೀರಿ. ನಮ್ಮಲ್ಲಿರುವಂಥ ಮಾಹಿತಿ ಪ್ರಕಾರ ಯಾವುದೇ ಒಬ್ಬ ಅಪರಾಧಿಯಾದವನು ನನಗೆ handcuff ಹಾಕಿಕೊಂಡು ನೀವು ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಿಯೆಂದು ಯಾರು ಹೇಳುವುದಿಲ್ಲ. ಅದರಲ್ಲೂ ಯಾವ journalist ಕೂಡ ವಿಶೇಷವಾಗಿ ನನಗೆ handcuff ಹಾಕಿ ಜನರಿಗೆಲ್ಲಾ ತೋರಿಸುವಂಥಾದ್ದು, ಅದು ಏನೇ ಇದ್ದರೂ ಕೂಡ All India levelನಲ್ಲಿ Journalist Committeeಗಳು ಇರುತ್ತವೆ, ಅಥವಾ ರಾಜ್ಯ ಮಟ್ಟದಲ್ಲಿ compliant ಕೊಡುತ್ತಾರೆ.

ಅದನ್ನು ಮಾಡುತ್ತಾರೆಯೇ ಹೊರತು ಯಾರೂ ಕೂಡ ಅವಮಾನಕ್ಕೆ ಒಳಪಟ್ಟು, ಹೆಚ್ಚಿಗೆ ಅವಮಾನ ಆಗಬೇಕು ಎಂದು ಬಯಸುವುದಿಲ್ಲ. ಏಕೆಂದರೆ, ತಮ್ಮ ಸರ್ಕಾರ, ತಾವು ಮಾಡತಕ್ಕಂಥ ಅವಮಾನವೇ ಸಾಕು. ಅದನ್ನು ಮೀರಿ ಪುನ: ನನಗೆ hand cuff ಹಾಕಿ ಮೆರವಣಿಗೆ ಮಾಡಿ ಎಂದು ಯಾವ journalist ಸಹಾ ಹೇಳುವುದಿಲ್ಲ. ಅದೂ ಕೂಡ ನಡೆದಿದೆ. ಅದಕ್ಕೆ ಕಾರಣವೇನೆಂದರೆ, ಅಲ್ಲಿನ ಪೊಲೀಸಿನವರಿಗೆ ತಾವು ಕುಮ್ಮಕ್ಕು ಕೊಡುತ್ತಿದ್ದೀರಿ. ಅದಕ್ಕಾಗಿ ಅವರು ಆ ರೀತಿಯಾಗಿ ನಡೆದುಕೊಳ್ಳುತ್ತಿದ್ದಾರೆ ಎನ್ನತಕ್ಕಂಥ ಮಾತು ಅಲ್ಲಿಂದ ಬಂದಿದೆ. ಈ ದೊಡ್ಡ ಜವಾಬ್ದಾರಿ ನಿಮ್ಮ ಮೇಲೆ ಇದೆ. ನಿಮ್ಮ ಮಾತು ಕೇಳಿ ಯಾವುದೇ ಒಬ್ಬ ಪೊಲೀಸ್ ಅಧಿಕಾರಿ ಈ ವರ್ತನೆಯನ್ನು ಅಲ್ಲಿ ನಡೆಸಿದಾಗ, ಖಂಡಿತವಾಗಿ ಯೂ ಹೆಚ್ಚಿನ ಜವಾಬ್ದಾರಿ ನಿಮ್ಮ ಮೇಲಿದೆ. ಏಕೆಂದರೆ, ಇಂಥಹುದು ಇದೊಂದೇ ಪ್ರಕರಣವಲ್ಲ. ಈ ಹಿಂದೆ, ಪದ್ಮಪ್ರಿಯ ಕೇಸಿನಲ್ಲಿ ಕೂಡ ಇದೇ ರೀತಿಯಾಗಿ ಆಯಿತು. ಅದನ್ನು ನೀವು defend ಮಾಡಿಕೊಂಡು ಹೇಳಿದಿರಿ. ನಿಮ್ಮ ಹೆಸರನ್ನು ಬೇರೆಯವರೇನಾದರೂ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೋ, ಏನೋ ನನಗೆ ಗೊತ್ತಿಲ್ಲ ಅಥವಾ ಉದ್ದೇಶಪೂರ್ವಕವಾಗಿ ನೀವು ಅದನ್ನು neglect ಮಾಡುತ್ತೀರೋ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಇಲ್ಲದಿದ್ದರೆ, ಇಂಥ ಘಟನೆಗಳು ನಿಮ್ಮಲ್ಲಿಯೇ ಆಗುತ್ತಿರತಕ್ಕಂಥಾದ್ದು, ನಿಮ್ಮ ಮೂಗಿನ ಮುಂದೆಯೇ ಆಗುತ್ತಿರತಕ್ಕಂಥಾದ್ದು ಹೇಗೆ? ಅಥವಾ ನಿಮ್ಮ ಹೆಸರನ್ನು ತೆಗೆದುಕೊಂಡು ನಿಮ್ಮವರು ಯಾರಾದರೂ misuse ಮಾಡುತ್ತಾರೆಯೇ ಎನ್ನತಕ್ಕಂಥಾದ್ದನ್ನು ತಾವು enquiry ಮಾಡಿಸಿ. ಇಲ್ಲದಿದ್ದರೆ, ಈ ಜವಾಬ್ದಾರಿಯನ್ನು ನೀವು ಹೊತ್ತುಕೊಳ್ಳಬೇಕಾಗುತ್ತದೆ. ಏಕೆಂದರೆ, ಈ ರೀತಿ ಇವತ್ತು ಈ journalistಗೆ ಆಗಿದೆ. ನಾಳೆ ಇನ್ನೊಬ್ಬ journalist ಸತ್ಯಾಂಶವನ್ನು ಬರೆದರೆ, facts ಬರೆದರೆ ಅವರಿಗೂ ಕೂಡ ಇದೇ ರೀತಿ ಆಗುತ್ತದೆ. ಇವತ್ತು ಇವರಿಗೆ hand cuff ಹಾಕಿ ಮೆರವಣಿಗೆ ಮಾಡಿದ್ದಾರೆ. ನಾಳೆ ಕಠೋರವಾಗಿ ಬರೆದಂಥ ವ್ಯಕ್ತಿಯನ್ನು ಮುಗಿಸಿಬಿಡಿ, ನಾನು ಹೋಂ ಮಿನಿಸ್ಟರ್ ಆಗಿದ್ದೇನೆ, ನಾನು ನಿಮ್ಮನ್ನು ನೋಡಿಕೊಳ್ಳುತ್ತೇನೆ ಎಂದರೆ ಅವನ ಗತಿಯೇನು? ಅದಕ್ಕಾಗಿ ಹೇಳುತ್ತಿದ್ದೇನೆ, ಇದರ ಬಗ್ಗೆ ಒಂದು ಸದನ ಸಮಿತಿ ಆಗಬೇಕು. ಏಕೆಂದರೆ, ಅವರು ಸ್ಪಷ್ಟವಾಗಿ ಏನು ನಡೆದಿದೆ ಎನ್ನತಕ್ಕಂಥಾದ್ದನ್ನು ಹೇಳಬೇಕು. ಏಕೆಂದರೆ, ಇದು ಒಂದು ಪತ್ರಿಕೆಯ ಸ್ವಾತಂತ್ರ್ಯದ ಪ್ರಶ್ನೆ.

ಸಿ.ಓ.ಡಿ. ಅವರ ಕೈಯಲ್ಲೇ ಇದೆ. ಇಲ್ಲದಿದ್ದರೆ ಸಿ.ಓ.ಡಿ.ಗೇ ಕೊಡಿ ಎಂದು ಹೇಳುತ್ತಿದ್ದೆ. ಅದಕ್ಕಾಗಿ ಅದನ್ನು ನಾನು ಹೇಳುತ್ತಿಲ್ಲ. ನಾನು ಯಾರ ಬಗ್ಗೆ ಹೇಳುತ್ತಿದ್ದೇನೋ ಅವರ ಕೈಯಲ್ಲೇ ಸಿ.ಓ.ಡಿ. ಇದ್ದ ಕಾರಣ ಪುನ: ಅದನ್ನು ಅವರಿಗೇ ಕಳುಹಿಸಿದರೆ ಆಗುವುದಿಲ್ಲ. ಅದಕ್ಕಾಗಿ ಹೇಳುತ್ತಿದ್ದೇನೆ, ಸದನ ಸಮಿತಿಯಲ್ಲಿ ಇದರ ಬಗ್ಗೆ ನಿಷ್ಪಕ್ಷಪಾವಾದ ತನಿಕೆ ನಡೆಯಲಿ. ಒಬ್ಬ journalist ಮೇಲೆ ಆದಂಥ ಅನ್ಯಾಯ, ದಬ್ಬಾಳಿಕೆ ಬಗ್ಗೆ ತನಿಖೆ ನಡೆಯಲಿ. ಅವರ ಚರಿತ್ರೆಯ ಬಗ್ಗೆ ಏನೋ ಹೇಳುತ್ತಿದ್ದಾರೆ. ಅವರ ಬಗ್ಗೆ ಏನೇನು ಮಾಹಿತಿ ಇದೆಯೋ ನನಗೆ ಗೊತ್ತಿಲ್ಲ. ಆದರೆ ಒಬ್ಬ journalist ಬಗ್ಗೆ ಈ ರೀತಿಯಾಗಿ ನಡೆದುಕೊಂಡರೆ ಹೇಗೆ? ಹೆದರಿಸಿಕೊಂಡು, ಬೆದರಿಸಿಕೊಂಡು ಎಲ್ಲರನ್ನೂ ನಿಮ್ಮ ಕಂಟ್ರೋಲ್‌ನಲ್ಲಿ ಇಟ್ಟುಕೊಂಡರೆ ಹೇಗೆ? ಈಗಾಗಲೇ ಕೆಲವು ಪತ್ರಿಕೆಗಳು ಹೆದರಿಕೊಂಡು ನಿಮ್ಮ ಅಧೀನದಲ್ಲಿವೆ. ಯಾರು ಹೆದರುವುದಿಲ್ಲ, ಸರಿಯಾಗಿ ಬರೆಯುತ್ತಾರೆ ಅಥವಾ impartial ಆಗಿ ಇರುತ್ತಾರೆ ಅಂಥವರನ್ನೆಲ್ಲ ಹೆದರಿಸಿಕೊಂಡು ಎಲ್ಲರನ್ನೂ ಬಹಳ ದಿವಸ ಜೊತೆಯಲ್ಲಿ ಇಟ್ಟುಕೊಳ್ಳಬೇಕು ಎಂದರೆ ಅದು ಪ್ರಜಾಪ್ರಭುತ್ವದಲ್ಲಿ ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ಮಾಧ್ಯಮವೂ ಕೂಡ ನಾಲ್ಕನೆಯ ಕಂಬ. ಅದಕ್ಕಾಗಿ ತಾವು ಇದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ಅವರು ಮಾಡಿದುದಕ್ಕಿಂತ, ಹೇಳಿದುದಕ್ಕಿಂತಲೂ ಸತ್ಯಾಂಶ ಹೊರಬರಬೇಕಾಗಿದ್ದರೆ ದಯವಿಟ್ಟು ತಾವು ಒಂದು ಸದನ ಸಮಿತಿಯನ್ನು ಇದರ ಬಗ್ಗೆ constitute ಮಾಡಿ. ಅದಕ್ಕೆ ತಾವು ಯಾರನ್ನಾದರೂ ಹಾಕಿ ಪರವಾಗಿಲ್ಲ. ಯಾರು experts ಇದ್ದಾರೆ ಎಂದು ನೋಡಿಕೊಂಡು ಹಾಕಿ, ಬೇಕಿದ್ದರೆ, 15 ದಿವಸಗಳಲ್ಲಿ ರಿಪೋರ್ಟ್ ಕೊಡಬೇಕು ಎಂದು ಹೇಳಿ. ಆದರೆ ಒಂದು ಸದನ ಸಮಿತಿಯನ್ನು ಮಾಡುವುದು ಒಳ್ಳೆಯದು. ಒಂದು ವೇಳೆ, ಸದನ ಸಮಿತಿ ಬೇಡ ಎಂದರೆ, ತಮ್ಮ ಹತ್ತಿರ Petition Committee ಇದೆ. Deputy Speaker ಅದರ Chairman ಆಗಿರುತ್ತಾರೆ. ಅವರ ನೇತೃತ್ವದಲ್ಲಿರುವ ಆ ಕಮಿಟಿಗೆ ಇದನ್ನು ಕಳುಹಿಸಿ. ಅವರು ನೋಡಲಿ. ನಾನು ಇದನ್ನು ತಮಗೆ ಕಳುಹಿಸಿಕೊಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಯು.ಟಿ. ಖಾದರ್‌ರವರು ಎದ್ದುನಿಂತು ಮಾತನಾಡಲು ಪ್ರಯತ್ನಿಸಿದರು)

ಅಧ್ಯಕ್ಷರು :- ಇದು ಗಮನ ಸೆಳೆಯುವ ಸೂಚನೆ, ಅವಕಾಶ ಕೊಡಲು ಆಗುವುದಿಲ್ಲ.

ಶ್ರೀ ಯು.ಟಿ. ಖಾದರ್ :- ನಾನೂ ಕೂಡ ಕೊಟ್ಟಿದ್ದೇನೆ. ಇದು ನಮ್ಮ ಜಿಲ್ಲೆ ಸಂಬಂಧಪಟ್ಟದ್ದು. ಒಂದು ನಿಮಿಷ ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಿ. ಸರ್ಕಾರ ಸೇಡಿನ ಕ್ರಮವನ್ನು ಕೈಗೊಳ್ಳುತ್ತಿದೆ.

ಅಧ್ಯಕ್ಷರು:- ಇದು ಗಮನ ಸೆಳೆಯುವ ಸೂಚನೆ, ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಯು.ಟಿ. ಖಾದರ್ :- ಎರಡೇ ನಿಮಿಷ ಸಾಕು. ನನ್ನಲ್ಲಿರತಕ್ಕಂಥ ಮಾಹಿತಿಯನ್ನು ಹೇಳುತ್ತೇನೆ.

ಅಧ್ಯಕ್ಷರು :- ಗಮನ ಸೆಳೆಯುವ ಸೂಚನೆ ಎಂದರೆ, ಯಾರು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿರುತ್ತಾರೆ, ಅವರಿಗೆ ಮಾತ್ರ ಸೀಮಿತವಾಗಿರುತ್ತದೆ.

ಶ್ರೀ ಯು.ಟಿ. ಖಾದರ್ :- ನಾನೂ ಕೂಡ ಮೊನ್ನೆ ಸೈನ್ ಮಾಡಿ ಕೊಟ್ಟಿದ್ದೆ.

ಅಧ್ಯಕ್ಷರು :- ಅದಕ್ಕೆ end ಎನ್ನುವುದೇ ಇರುವುದಿಲ್ಲ. ಎಲ್ಲರಿಗೂ ಅಲೋ ಮಾಡಿದರೆ ಅದು ಮುಗಿಯುವುದೇ ಇಲ್ಲ.

ಶ್ರೀ ಯು.ಟಿ. ಖಾದರ್ :- ಈ ಹಿಂದೆ ಅವರ ಕಛೇರಿಯನ್ನು ಧ್ವಂಸ ಮಾಡುವಂಥ ಕೆಲಸವಾಯಿತು.

ಅಧ್ಯಕ್ಷರು :- ಇಲ್ಲ, ಕುಳಿತುಕೊಳ್ಳಿ.

ಡಾ॥ ವಿ.ಎಸ್.ಆಚಾರ್ಯ:- ಮಾನ್ಯ ಅಧ್ಯಕ್ಷರೆ, ನಾವೆಲ್ಲ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು. ಮಾನ್ಯ ಖರ್ಗೆಯವರು ಹೇಳಿದ ಹಾಗೆ, ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, free press, independent judiciary, clean and efficient administration ಈ ಮೂರೂ ವಿಷಯದಲ್ಲಿ ಪೂರ್ತಿ ನೂರಕ್ಕೆ ನೂರರಷ್ಟು ನಂಬಿಕೆ ಇರುವವನು ನಾನು. ನಾವು ಸಚಿವರಾದದ್ದು 2006ನೇ ಇಸವಿಯಲ್ಲಿ, ಇದು ತಮಗೂ ಗೊತ್ತು. ಈ ಪ್ರಕರಣದಲ್ಲಿರುವ ಬಿ.ವಿ.ಸೀತಾರಾಂರವರು, ಎಷ್ಟೋ ವರ್ಷಗಳ ಹಿಂದಿನಿಂದಲೂ ಹೀಗೆ ಅವರು ನಡೆದುಕೊಳ್ಳುತ್ತಿದ್ದಂಥ ಸಂದರ್ಭದಲ್ಲೂ ಅವರ ಮೇಲೆ ಸರ್ಕಾರ ಕೇಸ್ ಹಾಕಲಿಲ್ಲ. ಈಗಲೂ ಕೇಸ್ ಹಾಕಿದ್ದು ಸರ್ಕಾರವಲ್ಲ. ಸಾರ್ವಜನಿಕರಿಂದ ದೂರು ಬಂದು, Magistrate courtನಲ್ಲಿ ದೂರು ಇದ್ದು, ಕೋರ್ಟಿನ ಆದೇಶದ ಪ್ರಕಾರ ಅವರಿಗೆ ವಾರೆಂಟ್ಸ್, ಸಮನ್ಸ್ ಹೋಗಿವೆ. ಕೊನೆಗೆ ಪೊಲೀಸರ ಮೇಲೆ contempt of court ಆಗುತ್ತದೆ ಎನ್ನುವ ಪರಿಸ್ಥಿತಿ ಬಂದಾಗ

ಅನಿವಾರ್ಯವಾಗಿ ಅವರನ್ನು ಅರೆಸ್ಟ್ ಮಾಡಬೇಕಾಯಿತು. ಆ ಪತ್ರಿಕೆಯ ಗುಣಸ್ವಭಾವ ಹೇಗೆ ಎನ್ನುವುದನ್ನೂ ಮಾನ್ಯ ಖರ್ಗೆಯವರೇ ಈಗ ಹೇಳಿದರು. ರಾಷ್ಟ್ರೀಯ ವಿಚಾರವಾದಿ ವಿಷಯದ ಬಗ್ಗೆ, ಕೆಲವು ಸಂಘ ಸಂಸ್ಥೆಗಳ ಬಗ್ಗೆ, ವ್ಯಕ್ತಿಗಳ ಬಗ್ಗೆ, ಅವರ ಮಾನಹಾನಿಯಾಗುವಂಥ ರೀತಿಯಲ್ಲಿ ಪತ್ರಿಕೆಯಲ್ಲಿ ಬರೆದರು. ತಾವು ಆ ಪತ್ರಿಕೆಯ ಮೂರು ದಿವಸದ editions ಅನ್ನು ನೋಡಿ. ಹೆಚ್ಚಿಗೆ ಬೇಡ, ಕೇವಲ ಮೂರು ದಿವಸದ್ದನ್ನು ನೋಡಿ. ಅದರಲ್ಲಿ ಏನೇನು ಬರುತ್ತಿದೆ ಎನ್ನುವುದನ್ನು ನಿಮ್ಮ ವಿವೇಚನೆಗೇ ಬಿಡುತ್ತೇನೆ. ಸಮಾಜದ ಅತ್ಯುನ್ನತ ಸ್ಥಾನದಲ್ಲಿರುವಂಥ ಜೈನ ಸ್ವಾಮಿಗಳಿರಬಹುದು, ಇನ್ನಿತರಿರಬಹುದು, ದೊಡ್ಡ ದೊಡ್ಡ ಸ್ಥಾನಗಳಲ್ಲಿರುವವರಿರ ಬಹುದು, ಅವರ ಮರ್ಯಾದೆಯನ್ನು ಹರಣ ಮಾಡುವಂಥಾದ್ದನ್ನು ಬರೆದಾಗ ಅನೇಕರು ನೊಂದುಕೊಂಡು ಸುಮ್ಮನಿರುತ್ತಾರೆ. ಆದರೆ ಅವರ ಪೈಕಿ ಕೆಲವರು ಕೋರ್ಟಿನ ಮೊರೆ ಹೋದಾಗ, ಅವರ ಮೇಲೆ ಮಂಗಳೂರಿನಲ್ಲಿ, ಉಡುಪಿಯಲ್ಲಿ, ಸಾಗರದಲ್ಲಿ ಹೀಗೆ ಬೇರೆ ಬೇರೆ ಕಡೆಗಳಲ್ಲಿ 10-20 ಕೇಸುಗಳು ಇರುವಂಥಾದ್ದು ನಿಜ. It is a fact. ಸರ್ಕಾರಕ್ಕೂ ಈ ಕೇಸುಗಳಿಗೂ ಏನೂ ಸಂಬಂಧವಿಲ್ಲ. ಅಂಥ ಒಂದು ಪ್ರಕರಣ ಇದಾಗಿದೆ. ಮಾನ್ಯ ಖರ್ಗೆಯವರು ಗೃಹಸಚಿವರಾಗಿದ್ದವರು, ಇಂಥಾದ್ದು ಬಂದರೆ ಏನು ಮಾಡಬೇಕು ಎನ್ನುವುದು ಅವರಿಗೂ ಗೊತ್ತಿದೆ. ಇದರಲ್ಲಿ ಸರ್ಕಾರದ role ಇಲ್ಲ. ಸಾರ್ವಜನಿಕರು ಹೋಗಿ ಕೇಸ್ ಹಾಕಿದಾಗ, ವಾರೆಂಟ್, ಅರೆಸ್ಟ್ ಎಲ್ಲವೂ ಆಗುವಂಥಾದ್ದೇ. ಇದು ನ್ಯಾಯಾಲಯದ ಅಧೀನದಲ್ಲಿರುವಂಥ ಕೇಸ್. ನ್ಯಾಯವಾಗಿ ನೋಡಿದರೆ, ಇದರ ಬಗ್ಗೆ ಇದಕ್ಕಿಂತ ಹೆಚ್ಚಿಗೆ ವಿವರಣೆ ಕೊಡುವಂಥಾದ್ದು ಸೂಕ್ತವಲ್ಲ. ಹಾಗಾಗಿ ವಸ್ತುಸ್ಥಿತಿಯ ಆಧಾರದ ಮೇಲೆ ಅವರು ಇದನ್ನು ವಿಮರ್ಶೆ ಮಾಡಬೇಕು. ಇದ್ದ factಅನ್ನು ನಾನು ಕೊಟ್ಟಿದ್ದೇನೆ. ಇದಕ್ಕಿಂತ ಹೆಚ್ಚಿಗೆ ಬೇಕಾದರೆ, ಅವರಿಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕು ಎನ್ನುವುದಾದರೆ, ಅವರ ಮೇಲೆ ಯಾವಯಾವ ಕೇಸುಗಳಿವೆ, ಯಾವಯಾವ ಬಗೆಯ ಕೇಸುಗಳಿವೆ ಇತ್ಯಾದಿ ಎಲ್ಲ ಮಾಹಿತಿಯನ್ನೂ ಒದಗಿಸುತ್ತೇವೆ. ಆ ಭಾಗದಲ್ಲಿ ತುಂಬ ವಿದ್ಯಾವಂತರು, ಸುಸಂಸ್ಕೃತರು ಇದ್ದು ಅವರ ಬಗ್ಗೆ ಅಪಾದನೆಗಳು, ಮಾನಹಾನಿ ಮಾಡುವಂಥ ಲೇಖನಗಳು ಬಂದರೆ ಜನ ಒಂದಷ್ಟು ದಿವಸ ಸಹಿಸುತ್ತಾರೆ. ಆದರೆ tolerance level ದಾಟಿದ ಮೇಲೆ ಅವರು ಏನು ಮಾಡಬೇಕು? ಅವರಿಗೆ ಇರುವ ಮಾರ್ಗವೆಂದರೆ ಕೋರ್ಟಿನ ಮೊರೆ ಹೋಗುವಂಥಾದ್ದು. ಅರೆಸ್ಟ್ ವಾರೆಂಟಿಗೆ ಹೋಗುವಾಗ ಚೆಕ್ ಲಿಸ್ಟ್‌ನ ಪಟ್ಟಿಯಲ್ಲಿ ನಾನು ನೋಡಿದೆ. "handcuff with chain" ಎನ್ನುವ ಒಂದು

ಅಂಶವಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಸ್ಪೆಂಡ್ ಆಗಿರುವ ಇಬ್ಬರು ಪೊಲೀಸರ ಮನವಿ ನನ್ನ ಹತ್ತಿರ ಬಂತು. ನನಗೆ handcuff ಹಾಕದಿದ್ದರೆ, ನಾನು ಕಾರಿನಿಂದ ಇಳಿಯುವುದಿಲ್ಲ, ಎಂದು ಹೇಳಿದಂಥಾದ್ದು, ಆದ್ದರಿಂದ ಕೊನೆಗೆ ಹೀಗೆ ಹಾಕಬೇಕಾಯಿತು, ಪತ್ರಕರ್ತರ ಒತ್ತಾಯದ ಮೇಲೆ ಹಾಕಲಾಯಿತು ಎನ್ನುವಂಥಾದ್ದನ್ನು ಅವರು ಮನವಿಯಲ್ಲಿ ತಿಳಿಸಿದ್ದಾರೆ. ಆ ರೀತಿಯ ವರ್ತಮಾನ ಸಿಕ್ಕಿದೆ. ಇದು ಸತ್ಯ ಹೌದೋ, ಅಲ್ಲವೋ ಎಂದು ಹೇಳುವುದಕ್ಕೆ, ನಾನು ಆಗಲೇ ಹೇಳಿದ ಹಾಗೆ, ನಮ್ಮಲ್ಲಿರುವ ಒಂದು ದೊಡ್ಡ ಕ್ಷೇತ್ರದಲ್ಲಿ, ಅದು ಕರ್ನಾಟಕದಲ್ಲಿ ಎಲ್ಲರಿಗೂ ಗೌರವ ಇರುವಂಥ ಕ್ಷೇತ್ರ, ಬೇಕಾದರೆ ಆ ಕ್ಷೇತ್ರಕ್ಕೆ ಹೋಗಿ ಈ ಮಾತನ್ನು ಹೇಳುತ್ತೇವೆ ಎಂದು ಹೇಳಿದ್ದಾರೆ. ನಾನು ಒಬ್ಬ ಹೋಂ ಮಿನಿಸ್ಟರ್ ಆಗಿ ಇದಕ್ಕಿಂತ ಹೆಚ್ಚಿಗೆ ಏನು ಹೇಳಲು ಆಗುತ್ತದೆ. ಇದರ ಬಗ್ಗೆ ಯಾರೂ ತಪ್ಪು ತಿಳಿದುಕೊಳ್ಳುವ ಅಗತ್ಯವಿಲ್ಲ. ಆಗಿರುವಂಥ ವಸ್ತುಸ್ಥಿತಿಯನ್ನು ಈ ಸದನದ ಮುಂದೆ ಹೇಳಿದ್ದೇನೆ. ಮಾನ್ಯ ಪ್ರತಿಪಕ್ಷದ ನಾಯಕರು Petition Committee ಇದನ್ನು ನೋಡಲಿ ಎಂದು ಹೇಳಿದ್ದಾರೆ. ಅದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ. ನಾವು ಇದನ್ನು Petition Committee ಗೆ ಕೊಡುತ್ತೇವೆ. We have nothing to hide. ನಾನು ಮೊದಲೇ ಹೇಳಿದ ಹಾಗೆ, ನಾವು ದೀನದಯಾಳ ಉಪಾಧ್ಯಾಯರ ಶಿಷ್ಯರು. ಹಾಗಾಗಿ ಏನೂ ತೊಂದರೆಯಿಲ್ಲ.

ಅಧ್ಯಕ್ಷರು :- Petition Committeeಗೆ refer ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- Supreme Court ಕೂಡ ಕೈದಿಗಳನ್ನು ಕೈಕೋಳ ಸಮೇತ ನ್ಯಾಯಾಲಯಕ್ಕೆ ಹಾಜರುಪಡಿಸುವ ವಿಷಯದಲ್ಲಿ . . . .

ಡಾ॥ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :- ನೀವು ಹೇಳಿದ್ದನ್ನು ಒಪ್ಪಿಕೊಂಡಿದ್ದೇವೆ, ವಿಚಾರಣೆ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಆದಾಯಿತು. ಇದನ್ನು ಯಾವ ಅಧಿಕಾರಿಗಳು ಒತ್ತಾಯ ಮಾಡಿ ಹಾಕಿದ್ದಾರೋ ಅಥವಾ Sub Inspector ಇರಬಹುದು, Inspector ಇರಬಹುದು ಅವರ ಮೇಲೆ ನೀವು ಕ್ರಮವನ್ನು ಜರುಗಿಸಬೇಕಲ್ಲ?

ಡಾ॥ ವಿ.ಎಸ್. ಆಚಾರ್ಯ (ಗೃಹ ಸಚಿವರು) :- Petition Committee ಮುಂದೆ ಬರಲಿ ಎಂದು ಹೇಳಿದ್ದಕ್ಕೆ ಆ ಬಗ್ಗೆ ಒಪ್ಪಿಕೊಂಡಾಯಿತು. ನಿಮ್ಮ ಬೇಡಿಕೆಯನ್ನು ಒಪ್ಪಿಯಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಬೇಡಿಕೆಗೆ ಒಪ್ಪಿದ್ದೀರಿ, ಆಯಿತು. ಇದು handcuff ಹಾಕಿಸಿ ಕರೆದುಕೊಂಡು ಹೋಗಿದ್ದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ನಿಮ್ಮ ಕೈಯಲ್ಲಿರುವುದು.

ಡಾ॥ ವಿ.ಎಸ್. ಆಚಾರ್ಯ :- Habitual offender ಅವನು ಓಡಿಹೋಗುತ್ತಾನೆ ಅಥವಾ defy ಮಾಡುತ್ತಾನೆಂಬ ಹೆದರಿಕೆಯಲ್ಲಿ ಹಾಕಬಹುದೆಂದು Supreme Court ಹೇಳಿದೆ ಎಂದು ಹೇಳಿಕೊಂಡು ....

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇವರು habitual offender? ಅಥವಾ journalist?

ಡಾ॥ ವಿ.ಎಸ್. ಆಚಾರ್ಯ :- ಅವರೇ ಒತ್ತಾಯ ಮಾಡಿ ಹಾಕಿಸಿಕೊಂಡಿದ್ದರೆ ಏನು ಮಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಒಬ್ಬರು journalist ರನ್ನು habitual offender ಎಂದರೆ ಏನು ಹೇಳಬೇಕು?

ಡಾ॥ ವಿ.ಎಸ್. ಆಚಾರ್ಯ :- ಅವರು ಈ ಹಿಂದೆಯೂ arrest ಆಗಿದ್ದರು. ನಾನು Home Minister ಆಗುವ ಮುಂಚೆಯೂ ಅವರು arrest ಆಗಿದ್ದರು. ಆ ಸಲವೂ ಇದೇ ತರಹದ ನಾಟಕ ಮಾಡಿದ್ದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಲೇಖಕರು ಬೇಕಾದವರೂ ಇರುತ್ತಾರೆ, ಬೇಡದವರೂ ಇರುತ್ತಾರೆ. Journalist ನಿಮ್ಮ ಪರವಾಗಿಯೂ ಇರುತ್ತಾರೆ, ನಿಮ್ಮ ವಿರೋಧವಾಗಿಯೂ ಇರುತ್ತಾರೆ. ಈಗ ನಮ್ಮ ವಿರುದ್ಧವೂ ಬರೆಯುವವರಿರುತ್ತಾರೆ. ಪರವಾಗಿ ಬರೆಯುವವರೂ ಇರುತ್ತಾರೆ. ಅದರಲ್ಲಿ ನಿಮ್ಮ ಪರವಾಗಿ ಹೆಚ್ಚಿಗೆ ಬರೆಯುವವರಿರಬಹುದು, ನಮ್ಮ ಪರ ಕಡಿಮೆ ಬರೆಯುವವರಿರಬಹುದು. ಅಂದ ತಕ್ಷಣ ನಮ್ಮ ವಿರುದ್ಧ ಜಾಸ್ತಿ ಬರೆಯುತ್ತಾರೆಂದು ಎಲ್ಲರ ವಿರುದ್ಧ ನಾವು ದಂಗೆ ಏಳುವುದಕ್ಕಾಗುತ್ತದೆಯೇ?

ಡಾ॥ ಎ.ಎಸ್. ಆಚಾರ್ಯ :- ನಾವು ಅದರ ಬಗ್ಗೆ ತಲೆಕೆಡಿಸಿಕೊಂಡೇ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೀವು ತಲೆಕೆಡಿಸಿಕೊಳ್ಳುವುದಿಲ್ಲ ಎನ್ನುವುದಕ್ಕಿಂತ ಹೆಚ್ಚಾಗಿ ನಿಂತಲ್ಲೇ ಎಲ್ಲಾ ಬಂದ ಮೇಲೆ ಏಕೆ ತಲೆಕೆಡಿಸಿಕೊಳ್ಳುತ್ತೀರಿ? ಸುಖವಾಗಿದ್ದೀರಿ, ಇರಿ. ಆದರೆ, ನಾನು ಹೇಳುವುದೇನೆಂದರೆ, ಯಾರು hands cuff ಹಾಕಿ ಅವಮಾನ ಮಾಡಿದ್ದಾರೆ atleast ಅವರಿಗೆ ನೀವು ಶಿಕ್ಷೆ ಕೊಟ್ಟರೆ ಇನ್ನೊಬ್ಬರಿಗಾದರೂ ಈ ರೀತಿಯಾಗಿ ನಡೆಸಿಕೊಳ್ಳುವುದಿಲ್ಲ. ಇವರು ತಪ್ಪು ಮಾಡಿದ್ದರೆ ಕಾನೂನು ಪ್ರಕಾರವಾಗಿ ಇವರಿಗೂ ಶಿಕ್ಷೆಯಾಗಲಿ.

(ಗೊಂದಲ)

7. ಮಹಾಜನ ವರದಿ ಬಗ್ಗೆ ನಿರ್ಣಯ :

ಅಧ್ಯಕ್ಷರು :- ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಮಾಡುವವರಿದ್ದಾರೆ.

ಡಾ॥ ಬಿ.ಎಸ್. ಯಡಿಯೂರಪ್ಪ :- ಇವತ್ತು ಆ ಮನೆಯಲ್ಲಿ ಒಂದು ನಿರ್ಣಯವನ್ನು ಮಾಡಿದ್ದಾರೆ. ಅದೇ ನಿರ್ಣಯವನ್ನು ಇಲ್ಲಿಯೂ ಮಾಡ ಬೇಕಾಗುತ್ತದೆ. ಅದೇನೆಂದರೆ,

"1966ರಲ್ಲಿ ಮಹಾಜನ್ ವರದಿ ಮಂಡನೆಯಾಯಿತು. ಇಲ್ಲಿಯವರೆಗೆ ಅನೇಕ ಬಾರಿ ಆ ಮಹಾಜನ್ ವರದಿಯನ್ನು ಒಪ್ಪಿಕೊಂಡ ನಂತರ, ಅದನ್ನು ಅನುಷ್ಠಾನಕ್ಕೆ ಬರುವಂತೆ ಅಂಗೀಕಾರ ನಾವು ಮಾಡಿದ್ದೇವೆ. ಸದನದಲ್ಲಿ ತೀರ್ಮಾನ ಮಾಡಿದ್ದೇವೆ. ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿರುವ ಈ ಸಂದರ್ಭದಲ್ಲಿ ಬೇರೆ ಬೇರೆ ವಿಶೇಷ ಕಾರಣಕ್ಕಾಗಿ ಈ ಪ್ರದೇಶದ ಜನರ ಭಾವನೆಗಳನ್ನು ಗೌರವಿಸುವುದಕ್ಕೋಸ್ಕರ ಮತ್ತೊಮ್ಮೆ ಈ ನಿರ್ಣಯವನ್ನು ನಾನು ತರುತ್ತಿದ್ದೇನೆ. ಅದೇನೆಂದರೆ, ಇವತ್ತು ಈ ನಾಡಿನ ನೆಲ, ಜಲ, ಭಾಷೆಯ ಪ್ರಶ್ನೆ ಬಂದಾಗ ಪಕ್ಷಾತೀತವಾಗಿ ನಾವೆಲ್ಲಾ ಒಟ್ಟಾಗಿದ್ದೇವೆ. ಮತ್ತೆ ನಾನು ಏನೂ ಹೇಳುವಂಥ ಅಗತ್ಯವಿಲ್ಲ. ಆದ್ದರಿಂದ, ತಮ್ಮ ಅನುಮತಿಯನ್ನು ಕೇಳಿ ಈ ನಿರ್ಣಯವನ್ನು ಮಾಡುತ್ತೇನೆ."

"ಮಹಾಜನ್ ವರದಿ ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದಕ್ಕೆ ಅಂತಿಮವಾದ ವರದಿ. ಈ ವರದಿಯನ್ನು ಕರ್ನಾಟಕ ರಾಜ್ಯ ಸರ್ವಾನುಮತದಿಂದ